# ದೇವರು ಹಚ್ಚಿದ ದೀಪ



ಇದು ಮಾತೆ ಶ್ರೀ ಶಾರದಾ ದೇವಿಯವರ ಜೀವನದಲ್ಲಿ ನಡೆದ ಒಂದು ಘಟನೆ. ಅವರ ತೌರೂರು ಜಯರಾಂ ಬಾಟಿ ಎಂಬ ಹಳ್ಳಿ. ಪತಿ ಶ್ರೀರಾಮ ಕೃಷ್ಣರಿದ್ದುದು ದೂರದ ದಕ್ಷಿಣೇಶ್ವರದಲ್ಲಿ. ಪ್ರಯಾಣಕ್ಕೆ ವಾಹನ ಸೌಕರ್ಯವಿಲ್ಲದಿದ್ದ ಕಾಲ. ಒಮ್ಮೆ ಶಾರದಾ ದೇವಿಯವರು ಕೆಲವು ಮಂದಿ ಗ್ರಾಮೀಣ ಮಹಿಳೆಯರೊಂದಿಗೆ ತಮ್ಮ ತೌರಿನಿಂದ ದಕ್ಷಿಣೇಶ್ವರಕ್ಕೆ ಕಾಲ್ನಡಿಗೆಯಲ್ಲೇ ಪಯಣಿಸುತ್ತಿದ್ದರು. ಅವರಿಗಿನ್ನೂ ಚಿಕ್ಕ ವಯಸ್ಸು. ಆಯಾಸದಿಂದಾಗಿ ಅವರು ತಮ್ಮ ಸಂಗಡಿಗರೊಂದಿಗೆ ಹೆಜ್ಜೆ ಹಾಕಲಾಗದೇ ಹಿಂದುಳಿದು, ಒಂಟಿಯಾದರು. ಕತ್ತಲಾಯಿತು. ಇದ್ದಕ್ಕಿದ್ದಂತೆ ಭಯಂಕರ ಆಕೃತಿಯ ವ್ಯಕ್ತಿಯೊಬ್ಬ ಅವರನ್ನು ಅಡ್ಡಗಟ್ಟಿ, ಒರಟು ಧ್ವನಿಯಲ್ಲಿ– "ಏಯ್, ಯಾರು ನೀನು? ಈ ಅವೇಳೆಯಲ್ಲಿ ಒಂಟಿಯಾಗಿ ಎಲ್ಲಿಗೆ ಹೋಗುತ್ತಿರುವೆ?" ಎಂದು ಕೇಳಿದ. ಅವನೊಬ್ಬ ಡಕಾಯಿತನೆಂದು ಶಾರದಾ ದೇವಿಯವರಿಗೆ ಸ್ಪಷ್ಟವಾಯಿತು. ಆದರೂ ಅವರು ಧೃತಿಗೆಡಲಿಲ್ಲ, ಅತ್ಯಂತ ಆರ್ದ್ರ ಧ್ವನಿಯಲ್ಲಿ 'ಅಪ್ಪಾ, ನಾನು ನಿನ್ನ ಮಗಳು ಶಾರದೆ; ನಿನ್ನ ಅಳಿಯ ದಕ್ಷಿಣೇಶ್ವರದಲ್ಲಿದ್ದಾರೆ. ಅಲ್ಲಿಗೇ ನಾನು ಹೊರಟಿದ್ದೇನೆ. ನನ್ನ ಜೊತೆಯವರು ಮುಂದೆ ಹೋದರು. ನನಗೆ ದಾರಿ ತಿಳಿಯದು. ನನ್ನನ್ನು ಸುರಕ್ಷಿತವಾಗಿ ದಕ್ಷಿಣೇಶ್ವರಕ್ಕೆ ತಲುಪಿಸುತ್ತೀಯಾ?" ಎಂದು ಕೇಳಿಕೊಂಡರು. ಆ ಕಲ್ಲು ಹೃದಯದ ಡಕಾಯಿತ ಕರಗಿಹೋದ. ಆ ರಾತ್ರಿ ಶಾರದಾ ದೇವಿಯವರನ್ನು ತಮ್ಮ ಮನೆಯಲ್ಲಿ ವಾತ್ಸಲ್ಯದಿಂದ ಉಪಚರಿಸಿ, ಮರುದಿನ ಮುಂದಿನೂರಿನಲ್ಲಿದ್ದ ಸಂಗಡಿಗರೊಂದಿಗೆ ಸೇರಿಸಿದ ಡಕಾಯಿತ ದಂಪತಿ, ಅನಂತರ ಹಲವು ಬಾರಿ ಶಾರದಾ ದೇವಿಯವರನ್ನು ಕಂಡುಬರಲು ದಕ್ಷಿಣೇಶ್ವರಕ್ಕೆ ಹೋಗಿಬರುತ್ತಿದ್ದರು.

ಎಂಥ ಕಠೋರ ಹೃದಯದಲ್ಲೂ ಮಾನವೀಯತೆಯ ಒರತೆ ಎಲ್ಲೋ ಒಂದುಕಡೆ ಉಳಿದಿರುತ್ತದೆ– ಎಂಬುದಕ್ಕೆ ಈ ಪ್ರಸಂಗ ಒಂದು ಉದಾಹರಣೆ. ಸಹಜೀವಿಗಳಿಗೆ ಕಷ್ಟ ಬಂದಾಗ ಜಾತಿ, ಮತ, ದೇಶ, ವರ್ಣ– ಈ ಎಲ್ಲ ವ್ಯತ್ಯಾಸಗಳನ್ನು ಮರೆತು, ಸಾಂತ್ವನ ಹೇಳಿ, ಆಶ್ರಯ ನೀಡಿ, ಕೈಲಾದಷ್ಟು ಸಹಾಯ ಮಾಡಿ, ಅವರ ಕಷ್ಟದ ತೀವ್ರತೆ ಸ್ವಲ್ಪವಾದರೂ ಕಡಮೆಯಾಗುವಂತೆ ಮಾಡುವುದು ಮನುಷ್ಯನಲ್ಲಿರುವ ಸಹಜ ಸ್ಪಂದನಶೀಲತೆ. ಅತಿವೃಷ್ಟಿ, ಅನಾವೃಷ್ಟಿ, ಬರಗಾಲ, ಭೂಕಂಪ ಮುಂತಾದ ನೈಸರ್ಗಿಕ ವೈಪರೀತ್ಯಗಳಿಂದಲೋ, ಯುದ್ಧ, ದಂಗೆ, ಕೋಮುಗಲಭೆ ಮುಂತಾದ ಮಾನವ ನಿರ್ಮಿತ ಉತ್ಪಾತಗಳಿಂದಲೋ ಒಂದು ಪ್ರದೇಶದ ಜನ ತಲ್ಲಣಿಸುತ್ತಿದ್ದರೆ, ಕೋಟಿ ಕೋಟಿ ಮನಸ್ಸುಗಳು ಅವರಿಗಾಗಿ ಮಿಡಿಯುತ್ತವೆ; ಕೋಟಿ ಕೋಟಿ ಕೈಗಳು ತಮ್ಮ ತಮ್ಮ ಮಿತಿಯಲ್ಲಿ ಸಹಾಯ ನೀಡುತ್ತವೆ. 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದ ಎದೆಗೆ ಸತತ' ಎಂಬ ಅಡಿಗರ ಮಾತಿನಲ್ಲಿನ ಸತ್ಯ ಸಾಕ್ಷಾತ್ಕಾರಗೊಳ್ಳುತ್ತದೆ.

ಲೌಕಿಕರಾದ ನಾವು ದೇವರ ಎದುರು ನಂದಾದೀಪ ಉರಿಸಿ, ನಮ್ಮ ಬಯಕೆಗಳ ಪೂರೈಕೆಗಾಗಿ ಪ್ರಾರ್ಥಿಸುತ್ತೇವೆ. ಆದರೆ ಭಗವಂತ, ಯಾವ ಸ್ವಾರ್ಥವೂ ಇಲ್ಲದೆ, ನಮ್ಮೆಲ್ಲರ ಹೃದಯಗಳಲ್ಲಿ ಒಂದು ದೀಪ ಇರಿಸಿದ್ದಾನೆ. ಅದು ಉರಿಯುತ್ತಿರುವುದು ಪ್ರೀತಿ, ಸ್ನೇಹ, ವಿಶ್ವಾಸ, ಕರುಣೆ, ವಾತ್ಸಲ್ಯ– ಈ ಎಲ್ಲವೂ ಕೂಡಿರುವ ಎಣ್ಣೆಯಿಂದ. ಈ 'ದೇವರು ಹಚ್ಚಿದ ದೀಪ'ದ ಶುಭ ಪರಿಣಾಮವನ್ನು ಧ್ಯಾನಿಸುತ್ತಾ, ಕವಿ ಲಕ್ಷ್ಮೀನಾರಾಯಣ ಭಟ್ಟರು– 'ಕೊಲ್ಲಲು ಎತ್ತಿದ ಕೈಗೂ ಗೊತ್ತಿದೆ ಕೆನ್ನೆಯ ಸವರುವ ಪ್ರೀತಿ...' ಎಂದು ಸಂಭ್ರಮಿಸಿದ್ದಾರೆ. ಈ ದೀಪ ನಿರಂತರ ಉರಿಯುತ್ತಿರುವಂತೆ ನೋಡಿಕೊಳ್ಳಬೇಕಾದುದು ಸಪ್ರತಿಯೊಬ್ಬರ ಪವಿತ್ರಕರ್ತವ್ಯ. 'ಮಾ ವಿದ್ವಿಷಾವಹೈ' ಎನ್ನುವ ಉಪನಿಷತ್ತು, 'ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವಚ...' ಎನ್ನುವ ಭಗವದ್ಗೀತೆ– ಇವೆಲ್ಲವೂ 'ದೇವರು ಹಚ್ಚಿದ ದೀಪ' ಮಂಕಾಗದಿರಲು ದಾರಿ ತೋರಿಸುತ್ತವೆ!

■ ವೈನತೇಯ

## ಮಾತೇ ಮುತ್ತು

ಕೊಲ್ಲುವ ದೇವರಿಗಿಂತಲೂ, ರಕ್ಷಿಸುವ ದೆವ್ವವೇ ಮೇಲು!
-ಗಾದೆ

ಅತ್ಯಂತ ಕಡಿಮೆ ಅವಶ್ಯಕತೆಗಳಿರುವುದರಿಂದ ನಾನು ದೇವರಿಗೆ ಹತ್ತಿರ ಇದ್ದೇನೆ.
-ಸಾಕ್ರೆಟಿಸ್

ಯಾರನ್ನು ದ್ವೇಷಿಸುತ್ತೇವೋ ಅವರನ್ನು ಅರ್ಥಮಾಡಿಕೊಳ್ಳಲಾರೆವು.
-ಜೆ.ಆರ್.ಲೋವೆಲ್

ನಿಜವಾದ ಧರ್ಮನಿಷ್ಠರು ಎಂದೂ ಜಾತೀಯ ಕಲಹವನ್ನು ತೋರಿಸುವುದಿಲ್ಲ. ಎಲ್ಲರೊಂದಿಗೂ ಪ್ರೀತಿಯಿಂದ ಸಹಬಾಳ್ವೆ ನಡೆಸುವ ಭಾವನೆಯನ್ನು ಪಡೆದಿರುತ್ತಾರೆ.
-ಆನಂದಕಂದ

ನಮಗೆ ದೊರೆಯುದುದನ್ನು ದ್ವೇಷಿಸುವುದು ಬಹಳ ಸುಲಭ.
-ಈಸೋಪ್

ಗಟ್ಟಿ ಯಾವುದು, ಜಳ್ಳು ಯಾವುದು ಎಂಬುದನ್ನು ತಿಳಿದು– ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಪರಧರ್ಮವಾಗಬೇಕು.
-ಬಿ.ಎಂ.ಶ್ರೀ.

ಲೋಪಗಳಿಂದಲೇ ದೊಡ್ಡವರು ರೂಪಗೊಂಡಿದ್ದಾರೆ.
-ಶೇಕ್ಸ್‌ಪಿಯರ್

ದೊಡ್ಡವರು ಸೋಲಿನಲ್ಲೂ, ಗೆಲುವಿನಲ್ಲೂ ದೊಡ್ಡವರೇ.
-ಎಸ್.ವಿ.ಬೆನೆಟ್

ಹಸುವಿದ್ದು ಫಲವೇನು ಹಯವಿಲ್ಲದನ್ನಕ್ಕ? ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
-ಅಕ್ಕ ಮಹಾದೇವಿ

ಪ್ರಪಂಚದ ನಿಜವಾದ ಪವಾಡಗಳು ಕಣ್ಣಿಗೆ ಕಾಣದವಲ್ಲ; ಕಾಣುವಂಥವು.
-ಆಸ್ಕರ್ ವೈಲ್ಡ್

ಲಜ್ಜೆ ಇದ್ದರೆ ಬೇರೆ ಆಭರಣಗಳೇಕೆ?
-ಭರ್ತೃಹರಿ

ನಂಬಿದವ ಸುಖಿ, ನಂಬದವ ವಿವೇಕಿ.
-ಹಂಗೇರಿ ಗಾದೆ

ಒಳ್ಳೆಯದು ಮಾತ್ರ ಒಳ್ಳೆಯದನ್ನು ಗುರುತಿಸಬಲ್ಲದು.
-ಇ.ಬಿ.ಬ್ರೌನಿಂಗ್

ಪಶ್ಚಾತ್ತಾಪ ಪಟ್ಟ ಪಾಪಿ, ಎಂದೂ ತಪ್ಪು ಮಾಡದ ಹತ್ತು ಮಂದಿ ಋಷಿಗಳಿಗಿಂತ ಲೇಸು.
-ರಷ್ಯಾ ಗಾದೆ

ಪ್ರಜಾಪ್ರಭುತ್ವ ಬರಿಯ ಬಲವಲ್ಲ. ಬರಿಯ ಬಹುಮತವೇ ಅಲ್ಲ. ಹಕ್ಕುಗಳಿಗಿಂತ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಬಾಳಿಕೆಯ ಆಳಿಕೆ.
-ಬಿಎಂಶ್ರೀ